ಹೆಚ್ಚಾಗಿ ಬಡ ಕೃಷಿಕರು, ಕೃಷಿ ಕೂಲಿಗಾರರು, ಪರಿಶಿಷ್ಟ ಜನಾಂಗ, ಅಲ್ಪಸಂಖ್ಯಾತ ವರ್ಗದ ಮತ್ತು ಹಿಂದುಳಿದ ಜನಾಂಗಕ್ಕೆ ಸೇರಿದ ಜನರು ಸಣ್ಣ ಸಣ್ಣ ಗುಡಿಸಲುಗಳಲ್ಲಿ ವಾಸಿಸುವ ಒಂದು ಜಿಲ್ಲೆ. ಈ ಎಲ್ಲಾ ವಿಚಾರವನ್ನು ಪರಿಶೀಲಿಸಿ ಬಡ ಜನರ ಕನಸನ್ನು ನನಸು ಮಾಡುವಲ್ಲಿ ಈ ಬಾರಿ ಸರಕಾರವು ಯೋಜನೆಯ ಪ್ರಕಾರ ದಕ್ಷಿಣ ಕನ್ನಡ ಜಿಲ್ಲೆಗೆ ಹೆಚ್ಚಿಗೆ ಹುಡ್ಕೋ ಮನೆ ಮತ್ತು ಜನತಾ ಮನೆಗಳನ್ನು ಮಂಜೂರು ಮಾಡಬೇಕಾಗಿ ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಹೋದ ಸಾರಿಯೂ ಮಾನ್ಯ ಸದಸ್ಯರು ಇದನ್ನೇ ಕೇಳಿದ್ದರು. ಜನತಾ ಮನೆಗಳನ್ನು ಹುಡ್ಕೋ ನೆರವಿನಿಂದ ಕಟ್ಟಿಸಿಕೊಡತಕ್ಕಂಥ ಪ್ರಮಾಣವನ್ನು ಹೆಚ್ಚಿಸಲು ವರ್ಷ ವರ್ಷ ಹಣವನ್ನು ನಿಗದಿ ಮಾಡುತ್ತಿದ್ದೇವೆ. ಇನ್ನೂ ಹೆಚ್ಚು ಮನೆಗಳನ್ನು ಕಟ್ಟಿಸುವುದಕ್ಕೆ ಈ ಆರ್ಥಿಕ ವರ್ಷದಲ್ಲಿ ಹೆಚ್ಚು ಹಣ ಇಡುವುದಕ್ಕೆ ಏರ್ಪಾಡು ಮಾಡುತ್ತೇವೆ.

(೮) ಬೆಳಗಾವಿ ನಗರದಲ್ಲಿ ಮಿಾನು ಮಾರುವ ಸ್ಥಳವನ್ನು ಸ್ಥಳಾಂತರಿಸುವುದು

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ಬೆಳಗಾವಿ ನಗರದಲ್ಲಿ ಮಿೀನು ಮಾರುವ ಸ್ಥಳಗಳು ಸಾರ್ವಜನಿಕ ಆರೋಗ್ಯಕ್ಕೆ ಏಜೆ ಮಾಡುತ್ತಿದ್ದು ಕಂಡು ಬರುತ್ತದೆ. ಕಂಟೋನ್ಮೆಂಟ್ ಏರಿಯಾದಲ್ಲಿ ರಾಷ್ಟ್ರೀಯ ಹೆದ್ದಾರಿ ನಂ. ೪ರ ಸಮೀಪದಲ್ಲಿರುವ ಮಿೀನು ಮಾರಾಟ ಸ್ಥಳದ ಹೊರಗಡೆ ಟೆಂಪೊರರಿ ಷೆಡ್ಡುಗಳನ್ನು ಹಾಕಿ ರಸ್ತೆಯ ಬದಿಯಲ್ಲಿ ಸಾರ್ವಜನಿಕ ರಹದಾರಿಗೆ ತೊಂದರೆಯಾಗುವಂತೆ ಮಿೀನು ಮಾರುವ ವ್ಯವಸ್ಥೆ ನಡೆದಿದ್ದು ಇದರಿಂದ ಸಾರ್ವಜನಿಕರಿಗೆ ಮಾನಸಿಕವಾಗಿ ತೊಂದರೆಯಾಗಿದೆ. ಈ ವಿಷಯದಲ್ಲಿ ಶೀಘ್ರ ಕ್ರಮ ಕೈಗೊಳ್ಳುವಂತೆ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಆರೋಗ್ಯಕ್ಕೆ ಧಕ್ಕೆ ಬರುತ್ತಿರುವ ಈ ವಿಷಯವನ್ನು ಸರಕಾರ ತಡೆಗಟ್ಟುವಂತೆ ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಸನ್ಮಾನ್ಯ ಅಧ್ಯಕ್ಷರೇ, ಮಿೀನು ಮಾರಾಟ ಮಾಡತಕ್ಕಂಥ ಸ್ಥಳ ಆರೋಗ್ಯಕರವಾಗಿಲ್ಲವೆಂದು ಹೇಳಿದ್ದಾರೆ. ನಾನು ಇವತ್ತೇ ಬೆಳಗಾವಿ ನಗರ ಮಹಾ ಸಭೆಗೆ ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುವುದಕ್ಕೆ ಆದೇಶ ಕಳುಹಿಸುತ್ತೇನೆ.

(೯) ಹಿರಿಯೂರು ತಾಲ್ಲೂಕಿನ ಅರಣ್ಯ ಅಧಿಕಾರಿಯಿಂದ ದಂಡಂಪಯೋಗವಾಗಿರುವುದು

ಶ್ರೀ ಆರ್. ರಾಮಯ್ಯ.—ಮಾನ್ಯ ಅಧ್ಯಕ್ಷರೇ, ಹಿರಿಯೂರು ತಾಲ್ಲೂಕಿನಲ್ಲಿ ೧೯೮೫ರಿಂದ ೧೯೮೬ರವರೆಗೆ ಅರಣ್ಯ ಇಲಾಖೆಯಲ್ಲಿ ಆರ್.ಎಫ್.ಓ. ಹುದ್ದೆ ಖಾಲಿಯಿದ್ದಾಗ ಆಲ್ಲಿಯ ಫಾರೆಸ್ಟ್‌ರನ್ನೇ ಯರವಲು ಸೇವೆಯಲ್ಲಿ ಮುಂದುವರೆಯುವಂತೆ ಮಾಡಿದಾಗ, ಆ ವರ್ಷದಲ್ಲಿ ಸರ್ಕಾರ ಬಿಡುಗಡೆ ಮಾಡಿದ ಇಲಾಖಾ ಹಣ ಮತ್ತು ಬರಗಾಲದ ಹಣ ದುರಪಯೋಗವಾಗಿ ನಡೆಸಿದ ಸಭೆಯಲ್ಲಿ ಶೇಕಡ ೫೦ ಒಣಗಿ ಹೋಗಿವೆ. ಇದಕ್ಕೆ ಅಧಿಕಾರಿಯ ಉದಾಸಿನತೆಯೇ ಕಾರಣ. ಈ ಅಧಿಕಾರಿಯು ಸ್ಥಳೀಯವಾಗಿರುವ ಟಿಂಬರ್ ಡಿಪೋಗಳಿಗೆ ಅನಧಿಕೃತವಾಗಿ ಬರುತ್ತಿದ್ದ ಮರಗಳ ಸಾಗಣಿಕೆಯನ್ನು ಶಾಮಿಾಲಾಗುವುದರ ಮುಖೇನ ಹೆಚ್ಚಿಸಿದ್ದು ಇಂದಿಗೂ ಇದು ನಿರಂತರವಾಗಿ ಸಾಗುತ್ತಿದೆ. ಈಗಿರುವ ಆರ್.ಎಫ್.ಓ.ನ್ನು ಸಹ ನಿರ್ಲಕ್ಷಿಸಿ ಅವರಿಗೂ ಭಯ ಭೀತಿ ಬರುವಂತೆ ವರ್ತಿಸುತ್ತಿರುವ ಈ ಅಧಿಕಾರಿಯು ಒಮ್ಮೆ ಜಿಲ್ಲಾ ನೀರಾವರಿ ಇಲಾಖೆಗೆ ಸೇರಿದ ಮರವನ್ನು ಕಡಿದವರೊಂದಿಗೆ ಸೇರ್ಪಡೆಯಾಗಿ ಆ ಮರವು ಸಹ ಪತ್ತೆಯಾಗದ ರೀತಿಯಲ್ಲಿ ಸರ್ಕಾರಕ್ಕೆ ಸುಳ್ಳು ವರದಿಯನ್ನು ಕೊಟ್ಟಿರುತ್ತಾನೆ. ಜೊತೆಗೆ ಬರಗಾಲದ ಕಾಮಗಾರಿಯಲ್ಲಿ ಸ್ಥಳೀಯ ಕೆಲಸಗಾರರನ್ನು ನೇಮಿಸಿಕೊಳ್ಳದೆ ಕಡಿಮೆ ಕೂಲಿಗೆ ನೇಮಿಸಿಕೊಂಡು ಕೆಲಸಗಾರರಿಗೂ ಇಲಾಖೆಗೆ ಮೋಸ ಮಾಡಿರುವುದರಿಂದ ಕೂಡಲೆ ಅಮಾನತ್ತಿನಲ್ಲಿಡಲು ಕೋರುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಸನ್ಮಾನ್ಯ ಅಧ್ಯಕ್ಷರೇ, ಸಂಬಂಧಪಟ್ಟ ಮಂತ್ರಿಗಳಿಂದ ವರದಿ ತರಿಸಿ ಅವರಿಗೆ ಉತ್ತರ ಕೊಡುವುದಕ್ಕೆ ಏರ್ಪಾಡು ಮಾಡುತ್ತೇನೆ.

(೧೦) ಬೀಳಗಿ ತಾಲ್ಲೂಕಿನ ತೆಗ್ಗಿ ಗ್ರಾಮದ ಲಂಬಾಣಿ ತಾಂಡಕ್ಕೆ ಕುಡಿಯುವ ನೀರಿನ ಯೋಜನೆಯನ್ನು ಮಂಜೂರು ಮಾಡುವುದು

ಶ್ರೀ ಬಾಬುರೆಡ್ಡಿ ವಿ. ತುಂಗಳ್.—ಸನ್ಮಾನ್ಯ ಅಧ್ಯಕ್ಷರೇ, ಬೀಳಗಿ ತಾಲ್ಲೂಕಿನ ತೆಗ್ಗಿ ಗ್ರಾಮವು ಸುಮಾರು ೩,೦೦೦ ಜನಸಂಖ್ಯೆಯನ್ನು ಹೊಂದಿದ ಗ್ರಾಮವಾಗಿದ್ದು, ಅದಕ್ಕೆ ಹೊಂದಿಕೊಂಡಂತೆ ಒಂದು ಲಂಬಾಣಿ ತಾಂಡವೂ ಕೂಡ ಇದೆ. ಈ ಗ್ರಾಮಕ್ಕೆ ಶಾಶ್ವತವಾದ ಕುಡಿಯುವ ನೀರಿನ